ದಿನಾಂಕ: 28.11.2018 ರಂದು ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಉಪ ಕಾರ್ಯದರ್ಶಿ (ಅ) ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರರು ರವರೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

*********

ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ ಇಲಾಖಾ ಪರವಾಗಿ ಸ್ವಾಗತಿಸಿದರು. ಸಭೆಗೆ ಆಗಮಿಸಿದ್ದ ಇಲಾಖಾ ಅಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಉಪ ಕಾರ್ಯದರ್ಶಿಗಳು (ಅ) ಹಾಗೂ ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಇಲಾಖೆಯ ಅಭಿಯಂತರರುಗಳು ಮತ್ತು ಇತರೆ ಇಲಾಖಾ ಅಧಿಕಾರಿಗಳನ್ನೂ ಸಭೆಗೆ ಸ್ವಾಗತಿಸಿ, ವಿಷಯಸೂಚಿಯಂತೆ ಸಭೆ ನಡೆಸಿಕೊಡಲು ಅಧ್ಯಕ್ಷರಲ್ಲಿ ಮನವಿಸಿದರು.

ಮಾನ್ಯ ಸಚಿವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಇಲಾಖಾ ಅಧಿಕಾರಿಗಳು ತಮಗೆ ವಹಿಸಿರುವ ಜವಾಬ್ದಾರಿಯನ್ನು ಸಮರ್ಪಕವಾಗಿ, ಪ್ರಾಮಾಣಿಕವಾಗಿ ಸಕಾಲದಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕರೆ ನೀಡಿದರು. ಪ್ರಸ್ತುತ ಸಾಲಿನಲ್ಲಿ ಅಕ್ಟೋಬರ್ 2018 ರವರೆವಿಗೆ ಪ್ರತಿಯೊಂದು ಯೋಜನೆಗಳಡಿ ಸಾಧಿಸಿರುವ ಪ್ರಗತಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಸಭೆಯು ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು.

<u>ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ:</u>

1. ಸದರಿ ಯೋಜನೆಯಡಿ ರೂ. 1836 ಕೋಟಿ ಲಭ್ಯವಿದ್ದು, ಅದರಲ್ಲಿ ರೂ. 1030 ಕೋಟಿ ವಿನಿಯೋಗಿಸಿ ಶೇ. 56 ಪ್ರಗತಿ ಸಾಧಿಸಿದ್ದು, ಹೆಚ್ಚಿನ ಪ್ರಗತಿ ಸಾಧಿಸಲು ಅಗತ್ಯ ಕ್ರಮ.
2. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಸರಬರಾಜುರವರು IMIS ನಲ್ಲಿ ಕಂಡು ಬಂದಿರುವ ತಾಂತ್ರಿಕ ದೋಷವನ್ನು ತುರ್ತಾಗಿ ಸರಿಪಡಿಸಲು ಕ್ರಮ.
3. ಭೌತಿಕ ಪ್ರಗತಿ ವರದಿಸುವಾಗ ಮುಂದುವರೆದ ಕಾಮಗಾರಿಗಳು ಹಾಗೂ ಹೊಸ ಕಾಮಗಾರಿಗಳ ಗುರಿ ಸಾಧನೆಯನ್ನು ಪ್ರತ್ಯೇಕವಾಗಿ ನಮೂದಿಸುವುದು.
4. M.W.S, P.W.S. M.V.S., WPP ಘಟಕವಾರು ಗುರಿ ಸಾಧನೆಗಳ ಭೌತಿಕ ವಿವರ ಪ್ರತ್ಯೇಕವಾಗಿ ನೀಡಿದ ನಂತರ 4 ಘಟಕಗಳ ಮಾಹಿತಿಯನ್ನು ಒಟ್ಟುಗೂಡಿಸಿ ಜಿಲ್ಲಾವಾರು ಭೌತಿಕ ಪ್ರಗತಿ ವರದಿಸಲು ಕ್ರಮ.

5. ಟಾಸ್ಕ್ ಫೋರ್ಸ್ ಯೋಜನೆಯಡಿ ಕಂದಾಯ ಇಲಾಖೆ ನೀಡುವ ಅನುದಾನದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ಜಿಲ್ಲಾವಾರು ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು.

6. 2018–19 ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಡಿ ರೂ. 5.00 ಲಕ್ಷ ಅಂದಾಜುಗಳೊಳಗಿರುವ ಕಾಮಗಾರಿಗಳ ಕಾರ್ಯಾದೇಶಗಳನ್ನು ಡಿಸೆಂಬರ್ 10, 2018 ರೊಳಗೆ ನೀಡಿ, ಟೆಂಡರ್ ಕರೆಯಬೇಕಾದ ಕಾಮಗಾರಿಗಳ ಕಾರ್ಯಾದೇಶವನ್ನು ನಿಯಮಾನುಸಾರ ಟೆಂಡರ್ ಕರೆದು ಇತ್ಯರ್ಥಗೊಳಿಸಿ ಆದಷ್ಟು ಜಾಗೃತೆ ನೀಡಿ, ಎಲ್ಲಾ ಕಾಮಗಾರಿಗಳನ್ನು 31.03.2019 ರೊಳಗೆ ಪೂರ್ಣಗೊಳಿಸಲು ಅಗತ್ಯ ಎಲ್ಲಾ ಮುಂಜಾಗರೂಕತಾ ಕ್ರಮ ಕೈಗೊಳ್ಳುವುದು.

7. ಅಧೀಕ್ಷಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆರವರನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಗೆ ಆಹ್ವಾನಿಸುವುದು.

8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಅಧೀಕ್ಷಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರುಗಳ ತುರ್ತು ಸಭೆ ಕರೆದು ಸಭೆಯಲ್ಲಿ ಚರ್ಚಿಸಿ ಸಂದೇಹಗಳನ್ನು ಸ್ಥಳದಲ್ಲೇ ಸ್ಪಷ್ಟೀಕರಿಸಿಕೊಂಡು ಪ್ರತಿಯೊಂದು ಕಾಮಗಾರಿಗಳ ಅಂದಾಜಿನ ಕಡತದ ಅನುಮೋದನೆ ನೀಡುವುದು. ಈ ಸಂದರ್ಭದಲ್ಲಿ ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಸರಬರಾಜು ರವರು calendar of events ನಿಗದಿಪಡಿಸಿ ತುರ್ತು ಅಗತ್ಯ ಸುತ್ತೋಲೆ ಹೊರಡಿಸಲು ಕ್ರಮ.

9. IMIS ನಲ್ಲಿ ಗಣಕೀಕರಿಸಿ ಕಾಮಗಾರಿಗಳ ಚಾಲನೆ ನೀಡುವುದಕ್ಕೆ ತಾತ್ಕಾಲಿಕ ವಿನಾಯಿತಿ ನೀಡಿ, ಅಗತ್ಯವಿದ್ದಲ್ಲಿ ಸದ್ಯಕ್ಕೆ ಕಾಮಗಾರಿಗಳನ್ನು ಚಾಲನೆಗೊಳಿಸಿ, ನಂತರ IMIS ನಲ್ಲಿ ಆದಷ್ಟು ಬೇಗ ಗಣಕೀಕರಿಸಲು ಕ್ರಮ.

10. 2018-19 ನೇ ಸಾಲಿನಲ್ಲಿ ಮುಂದುವರಿದ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಇವು 2015–16, 2016–17 ಹಾಗೂ 2017–18 ರ ಯಾವ ಸಾಲಿಗೆ ಸೇರಿದ್ದು ಎಂಬುದನ್ನು ಗುರುತಿಸಿ ವರ್ಷವಾರು ಕಾಮಗಾರಿವಾರು, ಜಿಲ್ಲಾವಾರು ವಿವರ ನೀಡುವುದರ ಜೊತೆಗೆ ಮೊದಲು ಪ್ರಾರಂಭಿಸಿರುವ ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸಲು ಕ್ರಮ.

11. ಪ್ರತಿಯೊಂದು ಜಿಲ್ಲೆಯಲ್ಲಿ ಮುಂದುವರಿದ ಕಾಮಗಾರಿಗಳು ಬಾಕಿ ಇದ್ದು, ಆರಂಭಿಕ ಶಿಲ್ಕು ಅನುದಾನವಿದ್ದರೂ ಮುಂದುವರೆದ ಕಾಮಗಾರಿಗಳನ್ನು ಈವರೆವಿಗೆ ಪೂರ್ಣಗೊಳಿಸದಿರುವುದು ಅಸಮಾಧಾನಕರ. 31.03.2019 ರೊಳಗೆ ಹಿಂದಿನ ವರ್ಷದ ಎಲ್ಲಾ ಮುಂದುವರೆದ ಕಾಮಗಾರಿಗಳು ಹಾಗೂ 2018–19 ನೇ ಸಾಲಿನ ಎಲ್ಲಾ ಕಾಮಗಾರಿಗಳನ್ನು ಮುಕ್ತಾಯಗೊಳಿಸುವುದು.

12. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸದರಿ ಯೋಜನೆಯಡಿ ಜಿಲ್ಲೆಗೆ ನೀಡಿರುವ ಅನುದಾನವನ್ನು ಆಯಾ ವರ್ಷಗಳಲ್ಲಿ ವಿನಿಯೋಗಿಸದೇ ಬಾಕಿ ಉಳಿಸಿಕೊಂಡು ಪ್ರಸ್ತುತ ಸರ್ಕಾರಕ್ಕೆ IMIS Problem ಹಾಗೂ ಇನ್ನಿತರ ಕಾರಣ ನೀಡುತ್ತಿದ್ದು, ಆಯುಕ್ತರು, ಈ ಬಗ್ಗೆ ವೈಯಕ್ತಿಕ ಗಮನಹರಿಸಿ ಅಧ್ಯಯಿಸಿ ಸಕಾರಣಗಳನ್ನು ಪಟ್ಟಿ ಮಾಡಿ ವರದಿ ನೀಡುವುದು.

13. WPP ಯೋಜನೆಯಡಿ ಅನುಮೋದನೆಗೊಂಡ ಶುದ್ದ ಕುಡಿಯುವ ನೀರು ಘಟಕಗಳ ಅನುಮೋದನೆ 18,638 ಇದ್ದು, 15,832 ಘಟಕಗಳನ್ನು ಸ್ಥಾಪಿಸಿದ್ದು, ಉಳಿಕೆ 2806 ಘಟಕಗಳ ಕಾಮಗಾರಿಗಳನ್ನು ಡಿಸೆಂಬರ್ 31, 2018 ರೊಳಗೆ ಮುಗಿಸಲು ಸೂಚಿಸಲಾಯಿತು.

14. ಟಾಸ್ಕ್‌ಫೋರ್ಸ್ ಯೋಜನೆಯಡಿ ಬರ ಪೀಡಿತ ಎಂದು ಘೋಷಿಸಲಾದ ಪ್ರತಿ ತಾಲ್ಲೂಕಿಗೆ ರೂ. 50.00 ಲಕ್ಷಗಳು ಮಂಜೂರಾಗಿದ್ದು, ಸದರಿ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸುವಾಗ ಜಲಮೂಲ ನಿಗಧಿಪಡಿಸುವುದಕ್ಕೆ ಒತ್ತು ನೀಡುವುದು ಹಾಗೂ ಪೈಪ್‌ಲೈನ್ ಅಳವಡಿಕೆ ಇತ್ಯಾದಿ ಕಾಮಗಾರಿಗಳಿಗೆ ಎಸ್‌ಡಿಆರ್‌ಎಫ್‌ಯಡಿ ಕ್ರಿಯಾ ಯೋಜನೆ ತಯಾರಿಸಿ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆಯುವುದು. ಒಟ್ಟಾರೆಯಾಗಿ ಟಾಸ್ಕ್‌ಫೋರ್ಸ್, ಎಸ್‌ಡಿಆರ್‌ಎಫ್ ಹಾಗೂ ಕ್ರಿಯಾ ಯೋಜನೆಗಳನ್ನು ಒಗ್ಗೂಡಿಸುವಿಕೆಯಡಿ ನಿರ್ವಹಿಸುವುದು. ಯಾವುದೇ ಕಾರಣಕ್ಕೂ ಮೂರು ಯೋಜನೆಗಳ ಕಾಮಗಾರಿಗಳು Overlapping ಆಗದಂತೆ ಎಚ್ಚರಿಕೆ ವಹಿಸುವುದು.

15. ಪ್ರಸ್ತುತ ಭೂ ವಿಜ್ಞಾನಿಗಳ ಕೊರತೆಯಿದ್ದು, ನಿವೃತ್ತ ಭೂ-ವಿಜ್ಞಾನಿಗಳನ್ನು/ಪರವಾನಿಗೆ ಹೊಂದಿರುವ ಭೂ-ವಿಜ್ಞಾನಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದು ಕೊಳವೆ ಬಾವಿಗಳನ್ನು ಕೊರೆಯಲು ಸ್ಥಳ ಗುರುತಿಸುವ ಕಾರ್ಯವನ್ನು ಕೈಗೊಳ್ಳಲು ಕ್ರಮ.

16. ಸಂಚಿತ ಪ್ರಗತಿಯ ವರದಿ ಪ್ರತ್ಯೇಕವಾಗಿ ನೀಡಿ, ಪ್ರಸ್ತುತ ಸಾಲಿನಲ್ಲಿ ಕೈಗೊಳ್ಳಬೇಕಾಗಿರುವ 3000 ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ ಬಗ್ಗೆ ಸಾಧಿಸಿರುವ ಆರ್ಥಿಕ ಮತ್ತು ಭೌತಿಕ ಗುರಿ ಸಾಧನೆ ವಿವರಗಳನ್ನು ಜಿಲ್ಲಾವಾರು ಪ್ರತ್ಯೇಕವಾಗಿ ನೀಡುವುದು.

17. ಪ್ರಸ್ತುತ ಸಾಲಿಗೆ NRDWP ಯೋಜನೆಯಡಿ ಒದಗಿಸಿರುವ ರೂ. 2200 ಕೋಟಿ ಅನುದಾನದ ವಿನಿಯೋಗ ಗಣನೀಯವಾಗಿ ಕಡಿಮೆ ಇರುವುದರಿಂದ ಟಾಸ್ಕ್‌ಫೋರ್ಸ್ ಕಾರ್ಯಕ್ರಮಗಳಡಿ ಪ್ರತ್ಯೇಕ ಅನುದಾನ ನೀಡಲು ಆರ್ಥಿಕ ಇಲಾಖೆ ಸಂಪರ್ಕಿಸಿದಾಗ ಹಾಲಿ NRDWP ಯೋಜನೆಯಡಿ ವಿನಿಯೋಗಿಸದೆ ಇರುವ ಅನುದಾನವನ್ನೇ ಬಳಸಲು ಸೂಚಿಸಿರುವುದರಿಂದ ಯೋಜನೆಯಡಿ

ಒದಗಿಸಿರುವ ಅನುದಾನ ಇಲಾಖೆಗೆ ಕಡಿಮೆಯಾಗಲಿರುವುದರಿಂದ ಸಕಾಲದಲ್ಲಿ ಅನುದಾನ ವಿನಿಯೋಗಿಸಲು ಅಗತ್ಯ ಕ್ರಮ ವಹಿಸುವುದು.

(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ)

<u>ಸ್ವಚ್ಛ ಭಾರತ ಅಭಿಯಾನ:</u>

18. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಇಲಾಖಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಶ್ರಮಿಸಿ, ರಾಜ್ಯವನ್ನು ಗ್ರಾಮೀಣ ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಲು ಸಹಕರಿಸಿರುವುದಕ್ಕೆ ಪ್ರಶಂಸೆ ವ್ಯಕ್ತಪಡಿಸಲಾಯಿತು.

19. ಹಿಂದಿನ Baseline Survey ಗಣನೆಗೆ ತೆಗೆದುಕೊಂಡಿದ್ದ ಕುಟುಂಬಗಳಿಗೆ ಮಾತ್ರ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಲು ಪ್ರೋತ್ಸಾಹ ಧನ ನೀಡಲಾಗಿತ್ತು. ತದನಂತರ ಕುಟುಂಬಗಳು ವಿಭಜನೆಗೊಂಡಂತೆ ಕುಟುಂಬಗಳ ಸಂಖ್ಯೆ ಜಾಸ್ತಿಯಾಗಿದ್ದರೂ ಅದನ್ನು ಪರಿಗಣಿಸಲಾಗಿರಲಿಲ್ಲ. ಇತ್ತೀಚೆಗೆ ಭಾರತ ಸರ್ಕಾರ Left out Baseline (LOB) ಸಮೀಕ್ಷೆಯಂತೆ ವಿಭಜನೆಗೊಂಡಂತೆ ಕುಟುಂಬಗಳನ್ನು ಹೆಚ್ಚುವರಿ ಕುಟುಂಬಗಳೆಂದು ಗಣನೆಗೆ ತೆಗೆದುಕೊಂಡು ಆ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯಗಳನ್ನು ಕಟ್ಟಿಸಿಕೊಡಲು ಪ್ರೋತ್ಸಾಹ ಧನ ನೀಡಲು ಅನುಮತಿ ನೀಡಿರುವುದರಿಂದ ಸದರಿ ಮಾಹಿತಿಯನ್ನು ತಂತ್ರಾಂಶದಲ್ಲಿ ಗಣಕೀಕರಿಸುವ ಕಾರ್ಯವನ್ನು ಡಿಸೆಂಬರ್ 2018 ರೊಳಗೆ ಪೂರ್ಣಗೊಳಿಸುವುದು.

20. ರಾಜ್ಯವು ಗ್ರಾಮೀಣ ಬಯಲು ಬಹಿರ್ದೆಸೆ ಮುಕ್ತವೆಂದು ಘೋಷಿಸಲಾಗಿದ್ದರೂ IHHL ನಿರ್ಮಾಣದ ಫಲಾನುಭವಿಗಳಿಗೆ ಪ್ರೋತ್ಸಾಹಧನ ವಿತರಿಸಲು IMIS ದಾಖಲಾತಿ ಪೂರ್ಣಗೊಳಿಸುವುದು.

21. 2018–19ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಆಯವ್ಯಯದಲ್ಲಿ ಒದಗಿಸಿರುವ ರೂ. 1810 ಕೋಟಿಗಳನ್ನು ಸಮರ್ಪಕವಾಗಿ ಬಳಸಲು ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ, ಶೌಚಾಲಯಗಳ ಸಂಕೀರ್ಣ ನಿರ್ಮಾಣದ ಕಡೆ ಹೆಚ್ಚು ಗಮನ ಹರಿಸಲು ಕ್ರಮ.

22. ಉಡುಪಿ ಜಿಲ್ಲೆಯಲ್ಲಿ ಸಣ್ಣ ಪ್ರಮಾಣದಲ್ಲಿ ಘನ ಮತ್ತು ದ್ರವ, ತ್ಯಾಜ್ಯ ನಿರ್ವಹಣೆಗೆ SLRC ಕೇಂದ್ರಗಳನ್ನು ಸ್ಥಾಪಿಸಿ Waste ನ್ನು Resource ಮಾಡಲು ತೆಗೆದುಕೊಂಡಿರುವ ಕ್ರಮವನ್ನು PPT ಮೂಲಕ ಸಭೆಗೆ ಪರಿಚಯಿಸಲಾಯಿತು.

23. ಇದೇ ರೀತಿ ಕೊಪ್ಪಳ ಜಿಲ್ಲೆಯಲ್ಲಿ ಕೊಪ್ಪಳ ತಾಲ್ಲೂಕಿನ ಹುಲಗಿ ಗ್ರಾಮ ಪಂಚಾಯತ್ ಪ್ರದೇಶದಲ್ಲಿ ಅಕ್ಕಪಕ್ಕದ 9 ಗ್ರಾಮ ಪಂಚಾಯತ್‌ಗಳು ಒಟ್ಟುಗೂಡಿ ಬೃಹತ್ ಪ್ರಮಾಣದ ಯಂತ್ರಗಳನ್ನು ಅಳವಡಿಸಿ ದೊಡ್ಡ ಪ್ರಮಾಣದಲ್ಲಿ ಬಹು ಗ್ರಾಮ ಪಂಚಾಯತ್ ತ್ಯಾಜ್ಯ ನಿರ್ವಹಣ ಘಟಕ ಸ್ಥಾಪಿಸಿರುವುದು ಸಭೆಯು ಮನಗೊಂಡಿತು.

24. ಮೇಲಿನ ಎರಡು ಘಟಕಗಳನ್ನು ಅಧ್ಯಯಿಸಿ ಇತರೆ ಜಿಲ್ಲೆಗಳು ತಮಗೆ ಸೂಕ್ತವೆನಿಸುವ ಮಾದರಿಯ ಘಟಕಗಳನ್ನು ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

25. ಸದರಿ ಘಟಕಗಳ ಸ್ಥಾಪನೆ ಹಾಗೂ ನಿರ್ವಹಣೆ ಕುರಿತು I E C ಕೊರತೆಯಿದ್ದು ಇದಕ್ಕೆ ವ್ಯಾಪಕ ಪ್ರಚಾರ ಕೈಗೊಳ್ಳಲು ಕ್ರಮ.

**<u>ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (MGNREGA):</u>**

ರಾಜ್ಯವು ಸತತವಾಗಿ ಬರಗಾಲ ಪರಿಸ್ಥಿತಿ ಎದುರಿಸುತ್ತಿದ್ದು MGNREGA ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡು ಹೆಚ್ಚು ಹೆಚ್ಚು ಮಾನವ ದಿನಗಳನ್ನು ಸೃಜಿಸಿ, ಆಸ್ತಿ ಸೃಜನೆಗೆ ಒತ್ತು ನೀಡುವುದು ಅನಿವಾರ್ಯವಾಗಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿ ಈ ಕೆಳಕಂಡ ಸೂಚನೆಗಳನ್ನು ನೀಡಲಾಯಿತು.

26. ಪ್ರಸ್ತುತ ಸಾಲಿಗೆ 8.50 ಕೋಟಿ ಮಾನವ ದಿನ ಸೃಜನೆಯ ಗುರಿಯ ಬದಲಿಗೆ 10.00 ಕೋಟಿ ಮಾನವ ದಿನ ಸೃಜನೆಗೆ ಜಿಲ್ಲಾವಾರು ಪರಿಷ್ಕೃತ ಗುರಿ ಹಂಚಿಕೆ (ಮೂಲ ಗುರಿಗಳನ್ನು ಪರಿಷ್ಕೃತ ಗುರಿ ಕೆಳಗೆ ಆವರಣದಲ್ಲಿ ನಮೂದಿಸುವುದು).

27. ಈಗಾಗಲೇ ಸಾಧಿಸಿರುವ ಜಿಲ್ಲಾವಾರು ಪ್ರಗತಿ ಮೇರೆ ಜಿಲ್ಲಾವಾರು ಗುರಿಗಳನ್ನು ಮರು ನಿಗದಿಪಡಿಸಿ/ಮರುಹಂಚಿಕೆ ಮಾಡುವ ಪ್ರಕ್ರಿಯೆಗೆ ಕ್ರಮ.

28. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಗಳಲ್ಲಿ ವಿಫುಲ ಅವಕಾಶವಿರುವ ಚಟುವಟಿಕೆಗಳನ್ನು ಗುರುತಿಸಿ ಹೆಚ್ಚುವರಿ ಗುರಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.

29. ಪ್ರಸ್ತುತ ಸಾಲಿನಲ್ಲಿ, ರಾಜ್ಯದಲ್ಲಿ ಘೋಷಿಸಲಾದ 100 ಬರಪೀಡಿತ ತಾಲ್ಲೂಕುಗಳಲ್ಲಿ 1 ವರ್ಷಕ್ಕೆ 150 ದಿನಗೂಲಿ ಕೆಲಸ ನೀಡಲು ಅಗತ್ಯ ಕ್ರಮ ಕೈಗೊಂಡು ಸದರಿ ತಾಲ್ಲೂಕುಗಳಲ್ಲಿ ಪ್ರತಿಯೊಂದು ಗ್ರಾಮ ಪಂಚಾಯತಿನಲ್ಲಿ 2–3 ಸಮುದಾಯ ಕೆಲಸ ಕೈಗೆತ್ತಿಕೊಳ್ಳಲು ಕ್ರಮ.

30. ಸದರಿ ಯೋಜನೆಯಡಿ ಮಣ್ಣಿನ ಕೆಲಸ, ನಾಲಾ ಟ್ರಿಮಿಂಗ್, ಚರಂಡಿ, ಕೆರೆ ಹೂಳೆತ್ತುವ ಕಾರ್ಯ ಕೈಗೊಂಡಲ್ಲಿ ಪ್ರತಿಯೊಂದು ಕಾಮಗಾರಿ ಕಡತ ಸೃಜಿಸಿ ಪ್ರತಿ ಕಾಮಗಾರಿಯ 3 ಹಂತದ ಫೋಟೋಗಳನ್ನು ಅಳವಡಿಸಿರುವುದನ್ನು ಖಾತ್ರಿಗೊಳಿಸಿಕೊಳ್ಳಲು ಕ್ರಮ.

31. ತೋಟಗಾರಿಕೆ ಬೆಳೆ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಯ ಹಿಂದಿನ 2-3 ವರ್ಷಗಳ ಅಂಕಿ ಅಂಶಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಜಾಲತಾಣದಲ್ಲಿ ಲಭ್ಯವಿರುವುದನ್ನು ಗಣನೆಗೆ ತೆಗೆದುಕೊಂಡು, ಪ್ರಸ್ತುತ ಜಿಲ್ಲೆಯಲ್ಲಿ ವಿಫುಲ ಅವಕಾಶವಿರುವುದನ್ನು ಖಾತ್ರಿಪಡಿಸಿಕೊಂಡು ಅದಕ್ಕನುಗುಣವಾಗಿ ಚಟುವಟಿಕೆ ತೆಗೆದುಕೊಳ್ಳುವುದು.

32. ಮೇಲಿನಂತೆ, ಕೃಷಿ, ರೇಷ್ಮೆ ಬೆಳೆ, ಸಾಮಾಜಿಕ ಅರಣ್ಯ, ಹೈನುಗಾರಿಕೆ ಬಗ್ಗೆ ಸಮರ್ಪಕ ಮಾಹಿತಿ ಪಡೆದು ಅದಕ್ಕನುಗುಣವಾಗಿ ಚಟುವಟಿಕೆ ಹಮ್ಮಿಕೊಳ್ಳುವುದು.

33. ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ. ನರ್ಸರಿ ಬೆಳೆಸುವವರ ಜೊತೆ ಸತತ ಸಂಪರ್ಕವನ್ನಿಟ್ಟುಕೊಂಡು ನರ್ಸರಿಯಲ್ಲಿ ಬೆಳೆಸಿದ ಗಿಡಗಳು ಯಾರು ಯಾರು ಖರೀದಿಸಿರುವರು ಎಲ್ಲಿ ನೆಡಲಾಗಿದೆ ಎಂಬ ಮಾಹಿತಿ ಪಡೆದು, 2019-20 ನೇ ಸಾಲಿಗೆ ಅಗತ್ಯವಿರುವ ಗಿಡಗಳನ್ನು ನೆಡಲು ಅನುವಾಗಲು ಪ್ರಸ್ತುತ ಮಳೆಗಾಲದಲ್ಲೇ ಬೆಳೆಸಲು ಮುಂಜಾಗಾರೂಕತಾ ಕ್ರಮ ವಹಿಸುವುದು.

34. ಅಗತ್ಯಕ್ಕೆ ತಕ್ಕಂತೆ 6 ತಿಂಗಳು ಅಥವಾ ಒಂದು ವರ್ಷದವರೆಗೆ ಪೋಷಿಸಿದ ಗಿಡಗಳನ್ನು ನೆಟ್ಟರೆ ಗಿಡ ಬದುಕುಳಿಯುವ ಪ್ರಮಾಣ ಹೆಚ್ಚಿರುವುದರಿಂದ, ಪ್ರತಿಯೊಂದು ಜಿಲ್ಲೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಈ ಬಗ್ಗೆ ಆದ್ಯತೆ ನೀಡಿ ಅಗತ್ಯ ಕ್ರಮ ಕೈಗೊಂಡು, ಆಯುಕ್ತರು, ಎಂ.ಜಿ.ಎನ್.ಆರ್.ಇ.ಜಿ.ಎ. ರವರಿಗೆ ವರದಿ ನೀಡುವುದು.

35. ದನದ ಕೊಟ್ಟಿಗೆ ನಿರ್ಮಾಣಕ್ಕೆ ಸಂಬಂದಿಸಿದಂತೆ ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳಿಂದ ಬೇಡಿಕೆ ಇದ್ದು, ಅವರುಗಳು 2-3 ಹಸುಗಳನ್ನು ಹೊಂದಿದ್ದರೂ 6 ಹಸುಗಳಿಗೆ ಸಾಕಾಗುವಷ್ಟು ಕೊಟ್ಟಿಗೆ ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಿ ಅನುದಾನ ಒದಗಿಸಿಕೊಡುವುದು.

36. ರೇಷ್ಮೆ ಬೆಳೆ ಕ್ಷೇತ್ರ ವಿಸ್ತರಣೆಗೆ ವಿಫುಲ ಅವಕಾಶವಿಲ್ಲದಿರುವ ಜಿಲ್ಲೆಗಳಲ್ಲಿ ಲಭ್ಯವಿರುವ ರೇಷ್ಮೆ ಇಲಾಖಾ ಸಿಬ್ಬಂದಿಗಳನ್ನು ಅಗತ್ಯವಿರುವ ಜಿಲ್ಲೆ/ತಾಲ್ಲೂಕುಗಳಿಗೆ ವರ್ಗಾಯಿಸಲು /ನಿಯೋಜಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ಕೈಗೊಳ್ಳುವುದು. ಆಯುಕ್ತರು, ಎಂಜಿಎನ್ಆರ್ಇಜಿಎ ರವರು ಕಾರ್ಯದರ್ಶಿ, ರೇಷ್ಮೆ ಇಲಾಖೆ ರವರ ಜೊತೆ ವಿಷಯ ಪ್ರಸ್ತಾಪಿಸಿ ಅಗತ್ಯ ಕ್ರಮ ಕೈಗೊಳ್ಳುವುದು.

37. 2019-20 ನೇ ಸಾಲಿನಿಂದ "ಜಲಾಮೃತ" (year of water) ಹೆಸರಿನಲ್ಲಿ (PPP ಮಾದರಿ) ಯೋಜನೆಯನ್ನು ಅನುಷ್ಠಾನಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯು ಅಂತರ್ಜಲ ಅಭಿವೃದ್ಧಿ, ಮಳೆ ನೀರು ಸದ್ಬಳಕೆ, ಬೃಹತ್ ಪ್ರಮಾಣದಲ್ಲಿ ಸಸಿ ನೆಡುವುದು ಹಾಗೂ ಪೋಷಣೆ ಇವೇ ಮಂತಾದ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ. ಇದಕ್ಕೆ ಪೂರಕವಾಗಿ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಈಗಾಗಲೇ ನೆಡಲಾಗುತ್ತಿರುವ ಗಿಡಗಳ ಪ್ರಮಾಣದ ಜೊತೆಗೆ ಹೆಚ್ಚುವರಿಯಾಗಿ 2000 ಸಸಿಗಳನ್ನು ನೆಡಲು ಕ್ರಮ ವಹಿಸುವುದು. ಪ್ರತಿ ಗ್ರಾಮ ಪಂಚಾಯತಿಗೆ ಒಂದು ತೋಪಿನಂತೆ ಗುರಿಯನ್ನು ನಿಗದಿಪಡಿಸಿಕೊಳ್ಳುವುದು.

38. 2019-20 ನೇ ಸಾಲಿಗೆ ಗ್ರಾಮ ಪಂಚಾಯತಿಗಳು, ತಮ್ಮ ವ್ಯಾಪ್ತಿಯಲ್ಲಿ ಬರುವ ಸರ್ಕಾರದ ಕಚೇರಿ, ಹಾಸ್ಟೆಲ್, ಶಾಲೆಗಳು, ರೈಲ್ವೆ ಹಳಿ ಅಕ್ಕ-ಪಕ್ಕ ಗಿಡ ನೆಡಲು ಹಾಗೂ ನಿರ್ವಹಣೆ ಮಾಡಲು ಅಗತ್ಯವಿರುವ ಎಲ್ಲಾ ಮುಂಜಾಗರೂಕತಾ ಕ್ರಮ ಕೈಗೊಳ್ಳುವುದು. ಗಿಡ ನೆಟ್ಟ ನಂತರ ನೀರು ಹಾಕಲು ಹಾಗೂ ಅದರ ನಿರ್ವಹಣೆಗೆ Self Help Group, N.G.Os ಗೆ ವಹಿಸುವ ಜವಾಬ್ದಾರಿ ಬಗ್ಗೆ ಅಧ್ಯಯಿಸಿ ಅಗತ್ಯಕ್ರಮ.

39. ಅಗತ್ಯವಿರುವ ಗಿಡ ನೆಡಲು ಅದನ್ನು ನರ್ಸರಿಯಲ್ಲಿ ಬೆಳೆಸಲು Indent place ಮಾಡಲು ಅಗತ್ಯ ಕ್ರಮ.

40. ಅರಣ್ಯ ಇಲಾಖೆಯ ವತಿಯಿಂದ ಪ್ರಾದೇಶಿಕ ಅರಣ್ಯ (Territorial forest) ಪ್ರದೇಶದಲ್ಲಿ ಗಿಡ ಬೆಳೆಸಲು ಹಾಗೂ ಅಗತ್ಯ ಕ್ರಮ ಕೈಗೊಳ್ಳಲು ಕೋರಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಇಲಾಖೆ ರವರಿಗೆ ಪತ್ರ ಬರೆಯುವುದು.

41. ಮಳೆನಾಡು/ಕರಾವಳಿ ಪ್ರದೇಶಗಳಲ್ಲಿ vented dams and Chekdam ಗಳನ್ನು ನಿರ್ಮಾಣ ಮಾಡಲು ವಿಫುಲ ಅವಕಾಶಗಳಿದ್ದು, ಅದರಂತೆ ಕ್ರಮವಹಿಸುವುದು.

42. ಮಹಾತ್ಮ ಗಾಂಧಿ ನರೇಗಾ ಯೋಜನೆ ಒಗ್ಗೂಡಿಸುವಿಕೆಯಡಿ ಆಶ್ರಯ ಮನೆಗಳಿಗೆ ಹೆಚ್ಚುವರಿಯಾಗಿ 90 ಮಾನವ ದಿನಗಳನ್ನು ಒದಗಿಸಲಾಗುತ್ತಿದ್ದು ರಾಜೀವ್ ಗಾಂಧಿ ವಸತಿ ನಿಗಮದಡಿ ನಿರ್ಮಿಸಿಕೊಳ್ಳುವ ಕೆಲ ಆಶ್ರಯ ಮನೆಗಳಿಗೆ ಮಾನವದಿನಗಳನ್ನು ಸೃಜಿಸದಿರುವುದು ಕಂಡುಬಂದಿದೆ. ಆಶ್ರಯ ಮನೆ ನಿರ್ಮಾಣಕ್ಕೆ ಕಾರ್ಯಾದೇಶ ನೀಡುವ ವೇಳೆ MGNREGA ಉದ್ಯೋಗ ಚೀಟಿ ಸಂಖ್ಯೆ ಮತ್ತು ಕಾಮಗಾರಿ ಸಂಕೇತವನ್ನು ನಮೂದಿಸಲು ಈ ಹಿಂದೆಯೇ ಅವಕಾಶ ಮಾಡಿಕೊಟ್ಟಿದೆ. ಆದರೂ ಸಹ ಗ್ರಾಮಪಂಚಾಯಿತಿಗಳಲ್ಲಿ ಹಲವು ಆಶ್ರಯ ಮನೆಗಳಿಗೆ ಸದರಿ ಮಾಹಿತಿಯನ್ನು ಕಡ್ಡಾಯವಾಗಿ ನಮೂದಿಸಿರುವ ಬಗ್ಗೆ RGRHCL ಸಾಫ್ಟ್‌ನಲ್ಲಿ ಮಾಹಿತಿ ಲಭ್ಯವಿಲ್ಲ. ಇದರಿಂದ ಹಿಂಬಾಲಿಕೆ ಕ್ರಮವಹಿಸಲು ಕಷ್ಟವಾಗುತ್ತಿದೆ.

43. ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜರೂರಾಗಿ ಎಲ್ಲಾ ಗ್ರಾಮಪಂಚಾಯಿತಿಗಳಲ್ಲಿ ಆಶ್ರಯ ಮನೆಗಳಿಗೆ ಕಡ್ಡಾಯವಾಗಿ ಉದ್ಯೋಗ ಚೀಟಿ ಸಂಖ್ಯೆ ಮತ್ತು ಕಾಮಗಾರಿ ಸಂಕೇತವನ್ನು

ನಮೂದಿಸಲು ನಿರ್ದೇಶನ ನಿಡುವುದು. ಹಾಗೂ RGRHCL ನಿಗಮ ಅಧಿಕಾರಿಗಳು ಉದ್ಯೋಗ ಚೀಟಿ ಸಂಖ್ಯೆ ಮತ್ತು ಕಾಮಗಾರಿ ಸಂಕೇತವನ್ನು ನಮೂದಿಸಿರುವ/ನಮೂದಿಸದಿರುವ ಮಾಹಿತಿಯನ್ನು RGRHCL ಸಾಫ್ಟ್‌ನಲ್ಲಿ Display ಮಾಡುವಂತೆ ಮಾನ್ಯ ಸಚಿವರು ಸೂಚಿಸಿದರು. ಇದಕ್ಕೆ ವಸತಿ ನಿಗಮದಿಂದ ಹಾಜರಿದ್ದ ಅಧಿಕಾರಿಗಳು 10 ದಿವಸದೊಳಗೆ ಸದರಿ ಮಾಹಿತಿಯನ್ನು RGRHCL ಸಾಫ್ಟ್‌ನ ಪಬ್ಲಿಕ್ ಪೋರ್ಟ್‌ಲ್‌ನಲ್ಲಿ Display ಮಾಡುವುದಾಗಿ ತಿಳಿಸಿದರು.

44. ಪ್ರತಿಯೊಂದು ಜಿಲ್ಲೆಯಲ್ಲಿ ಎಷ್ಟು ಪ್ರಮಾಣದ ಶಾಲಾ ಕಾಂಪೌಂಡ್ ನಿರ್ಮಾಣ ಮಾಡಬೇಕಾಗಿದೆ ಎಂಬುದರ ಮಾಹಿತಿಯನ್ನು ತಕ್ಷಣ ಕಳುಹಿಸಿಕೊಡಲು ಕ್ರಮ ವಹಿಸುವುದು.

45. MGNREGA ಯೋಜನೆಯಡಿ ಯಾವುದೇ ಕಾಮಗಾರಿ ಕೈಗೊಂಡಲ್ಲಿ ಕೂಲಿ ವೇತನ ಪಾವತಿಸದೇ ಸಾಮಗ್ರಿ ವೆಚ್ಚವನ್ನು ಭರಿಸಬಾರದು.

46. ಸದರಿ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯತಿಯಲ್ಲಿ ರೂ.16.25 ಲಕ್ಷದಲ್ಲಿ ರಾಜೀವ್‌ಗಾಂಧಿ ಸೇವಾ ಕೇಂದ್ರ ಕಟ್ಟಡ ನಿರ್ಮಾಣ ಮಾಡಲು ಅವಕಾಶವಿದ್ದು, ಅದನ್ನು ಸ್ಧದುಪಯೋಗಪಡಿಸಿಕೊಳ್ಳುವುದು.

47. ಸಾಮಾಜಿಕ ಲೆಕ್ಕ ಪರಿಶೋಧನೆ ರವರ ಲೆಕ್ಕ ಪರಿಶೋಧನೆ ವರದಿಯನ್ವಯ ತಪ್ಪಾಗಿ ಕೂಲಿ ವೇತನ ಪಾವತಿ ಮಾಡಿರುವುದನ್ನು ವಸೂಲಾತಿ ಮಾಡಲು ಅಗತ್ಯ ಕ್ರಮ ವಹಿಸುವುದು.

**(ಕ್ರಮ : ಆಯುಕ್ತರು, ಎಂಜಿಎನ್‌ಆರ್‌ಇಜಿಎ ಹಾಗೂ ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)**

## ರಸ್ತೆ ಸೇತುವೆ ಮತ್ತು ಕೆರೆಗಳು

### ನಬಾರ್ಡ್

48. ನಬಾರ್ಡ್ ರಸ್ತೆ ಯೋಜನೆಯಡಿ, ರಸ್ತೆ ನಿರ್ಮಾಣ ಮಾಡಲು ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಅನುದಾನ ಬಿಡುಗಡೆಗೊಳಿಸಿದ್ದರೂ, ಜಿಲ್ಲಾ ಪಂಚಾಯತಿಯಿಂದ ಅನುಷ್ಠಾನಾಧಿಕಾರಿಗಳಿಗೆ ಹಣ ಬಿಡುಗಡೆಗೊಳಿಸದಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿ ಸದರಿ ಅನುದಾನವನ್ನು ಬಿಡುಗಡೆಗೊಳಿಸಿ ಅನುಷ್ಠಾನಿಸಲು ಸೂಚಿಸಲಾಯಿತು.

(ಕ್ರಮ: ನಿರ್ದೇಶಕರು, ಗ್ರಾಮ ವಿಕಾಸ ಹಾಗೂ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

## ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಯೋಜನೆ – 3054 ಟಾಸ್ಕ್ ಪೋರ್ಸ್

49. 2018-19 ನೇ ಸಾಲಿನಲ್ಲಿ CMGSY 3054 Task Force ಯೋಜನೆಯಡಿ ರಸ್ತೆ ನಿರ್ಮಾಣ/ದುರಸ್ತಿ ಕಾರ್ಯ ಈವರೆವಿಗೂ ಕೈಗೊಳ್ಳದೆ S.R. rate ಗಳು ಬದಲಾವಣೆಯಾಗುತ್ತದೆಯೆಂದು ಅಂದಾಜು

ತಯಾರಿಕೆಯನ್ನೂ ಬಾಕಿ ಇಟ್ಟಿದ್ದು ಸಭೆ ಗಮನಕ್ಕೆ ತಂದುಕೊಂಡು ಹಾಲಿ ಇರುವ S.R. rate ನಂತೆ ಅಂದಾಜು ತಯಾರಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ವಹಿಸುವುದು.

50. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಅನುಷ್ಠಾನಿಸಲಾಗುತ್ತಿರುವ ಎಲ್ಲಾ ಯೋಜನೆಗಳ ಪ್ರಗತಿ ಪರಿಶೀಲನೆ ಅನುವಾಗುವಂತೆ ಬೆಳಗಾವಿಯಲ್ಲಿ ನಡೆಯಲಿರುವ ಅಧಿವೇಶನದ ಅವಧಿಯಲ್ಲಿ ವೀಡಿಯೊ ಸಂವಾದ ಕಾರ್ಯಕ್ರಮಕ್ಕೆ ಏರ್ಪಾಡು ಮಾಡುವುದು

**(ಕ್ರಮ: ನಿರ್ದೇಶಕರು, ಸು.ಗ್ರಾಯೋ, ಮುಖ್ಯ ಇಂಜಿನಿಯರ್, ಪಂಚಾಯತ್ ಇಂಜಿನಿಯರಿಂಗ್ ರಾಜ್ ವಿಭಾಗ)**

**<u>ಪಂಚಾಯತ್ ರಾಜ್ ವಿಷಯಗಳು</u>**

51. ಗ್ರಾಮ ಪಂಚಾಯತ್‌ಗಳಲ್ಲಿ ವಿವಿಧ ಯೋಜನೆಗಳಡಿ ಲಭ್ಯವಿರುವ ಅನುದಾನವನ್ನು ತುರ್ತು ಕುಡಿಯುವ ನೀರು ಕಾಮಗಾರಿಗಳಿಗೆ ಬಳಸಲು ಪ್ರಥಮ ಆದ್ಯತೆ ನೀಡಬೇಕು ಎಂದು ಸುತ್ತೋಲೆ ಹೊರಡಿಸಲು ಕ್ರಮ.

**(ಕ್ರಮ: ನಿರ್ದೇಶಕರು, ಪಂಚಾಯತ್ ರಾಜ್-I)**

52. 13ನೇ ಹಣಕಾಸು ಆಯೋಗದ ಅನುದಾನದಡಿ ಮಂಡ್ಯ ಜಿಲ್ಲೆಗೆ 4ನೇ ಕಂತು ಅನುದಾನ ಬಿಡುಗಡೆಗೊಳಿಸಿರುವುದಿಲ್ಲ. 14ನೇ ಹಣಕಾಸು ಆಯೋಗದ ಅನುದಾನದಡಿ ಗ್ರಾಮಪಂಚಾಯತಿಗೆ ಮಾತ್ರ ಅನುದಾನ ಬಿಡುಗಡೆಗೊಳಿಸಿದ್ದು, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಅನುದಾನ ಬಿಡುಗಡೆಗೊಳಿಸಲು ಅವಕಾಶವಿರುವುದಿಲ್ಲ. 13ನೇ ಹಣಕಾಸು ಆಯೋಗದ ಅನುದಾನದಡಿ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಲ್ಲಿ ಈಗಾಗಲೇ ಪೂರ್ಣಗೊಳಿಸಿರುವ ಕಾಮಗಾರಿಗಳಿಗೆ ಬಾಕಿ ಬಿಲ್ಲು ಪಾವತಿಸಬೇಕಾಗಿದ್ದು, ಅನುದಾನ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳುವುದು. ಜೊತೆಗೆ Plan Plus ತಂತ್ರಾಂಶದಲ್ಲಿ ಇದನ್ನು ಅಳವಡಿಸಲು ಅನುಕೂಲ ಮಾಡಿಕೊಡಲು ಅಗತ್ಯ ಕ್ರಮ.

**(ಕ್ರಮ: ನಿರ್ದೇಶಕರು, ಪಂಚಾಯತ್ ರಾಜ್-II)**

53. 14ನೇ ಹಣಕಾಸು ಆಯೋಗದ ಅನುದಾನದಡಿ ಮೊದಲನೇ ಕಂತಿನ ಅನುದಾನ ಬಿಡುಗಡೆಗೊಳಿಸಿದ್ದು, ಅದಕ್ಕನುಗುಣವಾಗಿ ಕ್ರಿಯಾ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಅಗತ್ಯ ಕ್ರಮ. 14 ನೇ ಹಣಕಾಸು ಆಯೋಗದ ಅನುದಾನದಡಿ ಮೊದಲನೇ ಮತ್ತು 2ನೇ ಕಂತಿನ ಅನುದಾನ ಒಟ್ಟುಗೂಡಿಸಿ ಕ್ರಿಯಾ ಯೋಜನೆ ತಯಾರಿಸಿ ಅನುಷ್ಠಾನಗೊಳಿಸಲು ಅವಕಾಶವಿಲ್ಲವೆಂದು ಸಭೆ ಮನಗೊಂಡು ಈ ಬಗ್ಗೆ ಅಗತ್ಯ ಕ್ರಮ.

ತೆರಿಗೆ ಪರಿಷ್ಕರಣೆ ಮತ್ತು ವಸೂಲಾತಿ (Demand Collection Balance -D C B)

54. ಗ್ರಾಮ ಪಂಚಾಯತಿಗಳ D C B ಹಣ ಬಾಕಿ ಬಹಳಷ್ಟು ಉಳಿದಿದ್ದು, ಇದರ ಜವಾಬ್ದಾರಿಯನ್ನು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿರವರಿಗೆ ವಹಿಸಿ ಹೆಚ್ಚು ವಸೂಲಾತಿ ಮಾಡಲು ಕ್ರಮ.

55. ಆಸ್ತಿ ತೆರಿಗೆ ಪರಿಷ್ಕರಣೆ ಈವರೆವಿಗೆ 1400 ಗ್ರಾಮ ಪಂಚಾಯತಿಗಳಲ್ಲಿ ಮಾತ್ರ ಮಾಡಲಾಗಿದ್ದು ಉಳಿಕೆ ಗ್ರಾಮ ಪಂಚಾಯತಿಗಳು ತೆರಿಗೆ ಪರಿಷ್ಕರಿಸದಿರುವುದಕ್ಕೆ ಕಾರಣ ಸಮೇತ ವರದಿ ನೀಡಲು ಹಾಗೂ ತೆರಿಗೆ ಪರಿಷ್ಕರಿಸಲು ಅಗತ್ಯ ಕ್ರಮ ವಹಿಸುವುದು.

**(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು & ನಿರ್ದೇಶಕರು ಪಂ.ರಾಜ್ II)**

ಡಿ.ಎಸ್.ಎಸ್ ತಂತ್ರಾಂಶದಲ್ಲಿ ಪ್ರಗತಿ ವಿವರ:

56. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಜಿಲ್ಲಾ ವಲಯ ಕಾರ್ಯಕ್ರಮಗಳ ಪ್ರಗತಿ ವಿವರಗಳನ್ನು ಡಿಎಸ್ಎಸ್ ತಂತ್ರಾಂಶದಲ್ಲಿ ಅಳವಡಿಸಲು ಈ ಹಿಂದಿನ ಸಭೆಗಳಲ್ಲಿ, ವೀಡಿಯೋ ಸಂವಾದಗಳಲ್ಲಿ ಹಾಗೂ ಹಲವಾರು ಪತ್ರಗಳ ಮೂಲಕ ಪದೇ ಪದೇ ತಿಳಿಸಲಾಗಿದ್ದರೂ ಜಿಲ್ಲಾವಲಯ ಯೋಜನೆಗಳ ಪ್ರಗತಿ ವಿವರಗಳನ್ನು ಸಮರ್ಪಕವಾಗಿ ಇಂದೀಕರಿಸದೇ ಟಿ.ಎನ್.ಎಂ.ಸಿ. ವೆಚ್ಚ ಹಾಗೂ ಡಿ.ಎಸ್ಎಸ್ ವೆಚ್ಚದಲ್ಲಿ ಸುಮಾರು ರೂ. 732.42 ಕೋಟಿಗಳಷ್ಟು ವ್ಯತ್ಯಾಸ ಕಂಡುಬರುತ್ತಿರುವುದರ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರು ತೀವ್ರ ಅಸಮಾಧಾನ ವ್ಯಕ್ತಪಡಿಸಿ ಸದರಿ ವಿಷಯದಲ್ಲಿ ಮುಂದಿನ ಸಭೆಯ ವೇಳೆ ಯಾವುದೇ ಕಾರಣಗಳನ್ನು ಹೇಳದೇ, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವೈಯಕ್ತಿಕ ಗಮನ ಹರಿಸಿ ಸದರಿ ತಂತ್ರಾಂಶದಲ್ಲಿ ಜಿಲ್ಲಾ ವಲಯ ಕಾರ್ಯಕ್ರಮಗಳ ಪ್ರಗತಿ ವಿವರಗಳನ್ನು ಇಂದೀಕರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

(ಕ್ರಮ: ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

ಮೇಲ್ಕಂಡ ಎಲ್ಲಾ ಅಂಶಗಳಡಿ ಅಗತ್ಯ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಸಂಬಂಧಪಟ್ಟ ಶಾಖೆಯ ನಿರ್ದೇಶಕರು/ಮುಖ್ಯಸ್ಥರುಗಳಿಗೆ ನಡವಳಿ ತಲುಪಿದ ಒಂದು ವಾರದೊಳಗೆ ಸಲ್ಲಿಸಲು ಸೂಚಿಸಿ ಸಭೆ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಕೃಷ್ಣ ಬೈರೇಗೌಡ)
ಸಚಿವರು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ.

ಸಂಖ್ಯೆ: ಗ್ರಾಅಪ/87/ಯೋಉಮಾ/2018 ದಿನಾಂಕ: 10.12.2018

ಇವರಿಗೆ :

1. ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಉಪ ಕಾರ್ಯದರ್ಶಿಗಳ (ಅಭಿವೃದ್ಧಿ)
2. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ.
3. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ.
4. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್.
5. ನಿರ್ದೇಶಕರು, ಪಂಚಾಯತ್ ರಾಜ್– 1.
6. ನಿರ್ದೇಶಕರು, ಪಂಚಾಯತ್ ರಾಜ್–2.
7. ನಿರ್ದೇಶಕರು, ಸ್ವ.ಉ.ಕಾ.
8. ನಿರ್ದೇಶಕರು, ಗ್ರಾಮ ವಿಕಾಸ.
9. ನಿರ್ದೇಶಕರು, ಇ–ಆಡಳಿತ. 9a) ವ್ಯವಸ್ಥಾಪಕ ನಿರ್ದೇಶಕರು, RGRHCL
10. ಆಂತರಿಕ ಆರ್ಥಿಕ ಸಲಹೆಗಾರರು.
11. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ.
12. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ.
13. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂ.ಇಲಾಖೆ, ಬೆಂಗಳೂರು.
14. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ.
15. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ, ಬೆಂಗಳೂರು.
16. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ.
17. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ.
18. ಅಪರ ನಿರ್ದೇಶಕರು, ಎಸ್.ಬಿ.ಎಮ್.
19. ಜಂಟಿ ನಿರ್ದೇಶಕರು, ರಸ್ತೆ ಮತ್ತು ಸೇತುವೆ.

ಪ್ರತಿ ಮಾಹಿತಿಗಾಗಿ:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂಚಾಯತ್ ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.